







**ಗುಂಡ:** ಸಕ್ಕರೆ ಕೆ.ಜಿ. ಎಷ್ಟು?
**ಅಂಗಡಿಯಾತ:** 20 ರೂಪಾಯಿ.
**ಗುಂಡ:** ಹೌದಾ? ಮತ್ತೆ ಮುಂದಿನ ರಸ್ತೆಯ ಅಂಗಡಿಯಲ್ಲಿ ಹತ್ತೇ ರೂಪಾಯಿ.
**ಅಂಗಡಿಯಾತ:** ಹಾಗಾದರೆ ಅಲ್ಲೇ ತಗೊಳ್ಳಿ ಹೋಗಿ.
**ಗುಂಡ:** ನಾನು ಆಗಲೇ ಹೋಗಿದ್ದೆ. ಅಲ್ಲಿ ಸ್ಟಾಕ್ ಇರಲಿಲ್ಲ.
**ಅಂಗಡಿಯಾತ:** ಹೌದಾ? ನಮ್ಮಲ್ಲೂ ಸ್ಟಾಕ್ ಇಲ್ಲದಿದ್ದಾಗ ಕೆ.ಜಿ.ಗೆ ಐದೇ ರೂಪಾಯಿ.

★★★

**ಗುಂಡ:** ಇವತ್ತು ನಾನು ಈ ಊರೆಲ್ಲಾ ಅಲೆದರೂ ನನಗೆ ಬೇಕಾದ್ದು ಮಾತ್ರ ಸಿಗಲಿಲ್ಲ.
**ಗೆಳೆಯ:** ಏನದು?
**ಗುಂಡ:** ಸಾಲ.

★★★

**ಮಗ:** ಅಪ್ಪಾ ಗ್ರಹಣ ಯಾವಾಗ ಹಿಡಿಯೋದು ಅಂತ ಗೊತ್ತಾ ನಿನಗೆ?
**ತಂದೆ:** ಹಿಡಿಯೋದು ಯಾವಾಗ ಅಂತ ತಲೆ ಕೆಡಿಸಿಕೊಳ್ಳಬೇಡ ಮಗನೆ. ಅದು ಯಾವಾಗ ಬಿಡುತ್ತೆ ಅನ್ನೋದರ ಬಗ್ಗೆ ಚಿಂತೆ ಮಾಡು.



**ಗೆಳೆಯ:** ಇತ್ತೀಚೆಗೆ ನೀನು ತುಂಬಾ ವಿಚಾರವಾದಿ ಆಗ್ತಾ ಇದೀಯ! ಗ್ರಹಣ ಹಿಡಿಯುವ ವೇಳೆಗೆ ಮದುವೆ ಇಟ್ಕೊಂಡಿದೀಯಲ್ಲ ಯಾಕೆ?
**ಗುಂಡ:** ವಿಚಾರ ವಾದಕ್ಕೆ ಬೆಂಕಿ ಬಿತ್ತು. ಆ ಸಮಯದಲ್ಲಿ ಯಾರೂ ಊಟ ಮಾಡೋಲ್ಲ ನೋಡು ಅದಕ್ಕೆ.

★★★

**ವೈದ್ಯ:** ಮತಿಭ್ರಮಣೆಗೆ ನಾನು ಕೊಟ್ಟ ಮಾತ್ರೆಗಳು ಹೇಗೆ ಕೆಲಸ ಮಾಡುತ್ತಿವೆ?
**ಗುಂಡ:** ಡೋಸ್ ಸ್ವಲ್ಪ ಜಾಸ್ತಿಯಾಯಿತೂಂತ ಕಾಣಿಸುತ್ತೆ. ಈ ಜನ್ಮದ್ದಲ್ಲದೆ ಹಿಂದಿನ ಜನ್ಮದ ಘಟನೆಗಳೂ ಈಗ ನೆನಪಿಗೆ ಬರ್‍ತಾ ಇವೆ. ನಾನು ನಿಮಗೆ ಆಗ ಕೊಟ್ಟಿದ್ದ 20 ಸಾವಿರ ರೂಪಾಯಿಗಳನ್ನು ಹೇಗೆ ಕೇಳೋದೂಂತ ಚಿಂತೆಯಾಗಿದೆ.

★★★



**ಗೆಳೆಯ:** (ದೇವಸ್ಥಾನದಿಂದ ಹೊರಗೆ ಬರುತ್ತ) ನಾನು ದೇವರ ಕಾಣಿಕೆಯಾಗಿ ಮಂಗಳಾರತಿ ತಟ್ಟೆಗೆ 100 ರೂಪಾಯಿ ಹಾಕಿದೆ.
**ಗುಂಡ:** ಅದೇನು ಮಹಾ ನಾನು ನಿನ್ನ ಹತ್ತರಷ್ಟು ಅಂದರೆ ಸಾವಿರ ರೂಪಾಯಿ ಹಾಕಿದೆ. ಆದರೆ ಪುರೋಹಿತರು ಅದನ್ನು ಬಿಸಾಕಿ ಬಿಟ್ಟರು.
**ಗೆಳೆಯ:** ಅಯ್ಯೋ ಅದ್ಯಾಕೆ ಹಾಗೆ ಮಾಡಿದರು?
**ಗುಂಡ:** ನಾನು ಹಾಕಿದ್ದು 1000 ರೂಪಾಯಿ ನೋಟು.

★★★

**ಟೀಚರ್:** ಗುಂಡ ಕಳೆದ ಒಂದು ವಾರ ನೀನು ಶಾಲೆಗೆ ಗೈರು ಹಾಜರಾಗಿದ್ದಕ್ಕೆ ಡಾಕ್ಟರ್ ಸರ್ಟಿಫಿಕೇಟ್ ತರೋಕೆ ಹೇಳಿದ್ದೆನಲ್ಲ ತಂದಿದೀಯಾ?
**ಗುಂಡ:** ನಾನು ಕೇಳಿದೆ ಸಾರ್! ಆದರೆ ಡಾಕ್ಟರ್ ತಮ್ಮ ಸರ್ಟಿಫಿಕೇಟನ್ನು ಯಾರಿಗೂ ಕೊಡೋಲ್ಲ ಅಂದುಬಿಟ್ಟರು.

★★★

**ತಾಯಿ:** ಪುಟ್ಟಿ ಆಂಟಿಗೆ ಒಂದು ಮುತ್ತು ಕೊಡು, ಅವರು ಊರಿಗೆ ಹೋಗ್ತಾ ಇದಾರೆ.
**ಪುಟ್ಟಿ:** ನಾನು ಕೊಡೋಲ್ಲ.
**ತಾಯಿ:** ಯಾಕೆ?
**ಪುಟ್ಟಿ:** ಯಾಕಂದ್ರೆ ನೆನ್ನೆ ಪಪ್ಪ ಕೊಡೋಕೆ ಹೋದಾಗ ಆಂಟಿ ಅವರ ಕೆನ್ನೆಗೆ ಜೋರಾಗಿ ಹೊಡೆದ್ರು!

★★★

**ಗುಂಡ:** ಡಾಕ್ಟ್ರೇ ಮೈಯೆಲ್ಲಾ ತುರಿಕೆ, ಕೆರೆದೂ ಕೆರೆದೂ ಸಾಕಾಗಿ ಹೋಗಿದೆ.
**ವೈದ್ಯ:** ನಿನಗೊಂದು ಚೀಟಿ ಬರೆದು ಕೊಡ್ತೀನಿ. ದಿನಾ ಉಪಯೋಗಿಸು.
**ಗುಂಡ:** ಏನದು ಡಾಕ್ಟ್ರೇ?
**ವೈದ್ಯ:** ಸೋಪು.

**(ಸಂಗ್ರಹ) ಎಂ.ಕೆ. ಮಂಜುನಾಥ್**